ಆ) ಡಿಸೆಂಬರ್, ಜನವರಿ ಮತ್ತು ಫೆಬ್ರವರಿ 2010ರ ಮಾಹೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬೆಂಕಿ ಅನಾಹುತ ಸಂಭವಿಸಿದ ಬಗ್ಗೆ ವರದಿಯಾಗಿರುವುದಿಲ್ಲ. ಆದರೂ ಸಹ ಮುನ್ನೆಚ್ಚರಿಕೆಯಾಗಿ ಬೆಂಕಿ ರಕ್ಷಣೆಗೆ ಬೆಂಕಿ ರೇಖೆ ರಚನೆ ಹಾಗೂ ರೇಖೆ ನಿರ್ವಹಣೆಯನ್ನು ಮಾಡಲಾಗಿರುತ್ತದೆ.

ಐ.ಟಿ.ಐ. ಕಾಲೇಜು ಕಟ್ಟಡಗಳು

344 (565) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಆರ್‌ಐಡಿಎಫ್, ನಬಾರ್ಡ್-XV ಯೋಜನೆ ಅಡಿಯಲ್ಲಿ ಎಷ್ಟು ಕೈಗಾರಿಕಾ ತರಬೇತಿ ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಮಂಜೂರಾದ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು;

ಇ) ಹಾಗಿಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಯಾವುದೂ ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಬಿಜಾಪುರ ಜಿಲ್ಲೆಯ ಒಟ್ಟು ಮೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ ಎರಡು ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸ್ವಂತ ಕಟ್ಟಡವಿದೆ. ನಬಾರ್ಡ್ ಆರ್‌ಐಡಿಎಫ್-XVI ಅಡಿಯಲ್ಲಿ ವಿಜಾಪುರ ಜಿಲ್ಲೆಯ ಬಬಲೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡವನ್ನು ₹259 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಪರಿಗಣಿಸಲಾಗುತ್ತಿದೆ.

ಕೈಗಾರಿಕೆಗಳಿಗೆ ನೀಡುತ್ತಿರುವ ನೀರಿನ ಪ್ರಮಾಣ

345 (796) ಶ್ರೀ ಪಾಟೀಲ ಎ.ಎಸ್. (ನಡಹಳ್ಳಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಅಣೆಕಟ್ಟು ಮತ್ತು ನಾರಾಯಣಪುರ ಅಣೆಕಟ್ಟಿನಿಂದ ಕೈಗಾರಿಕೆಗಳಿಗೆ ಮೀಸಲಿರಿಸಿರುವ ನೀರಿನ ಪ್ರಮಾಣವೆಷ್ಟು;